ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸೆಷನ್ಸ್ ಕೇಸ್ ನಂಬ್ರ **76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸಂತೋಷ್ ಸಾಲ್ಯಾನ್ | ಪ್ರಾಸಾಃ 1 |
| ತಂದೆಯ ಹೆಸರು | : | ವಿಠಲ್ ಬಂಗೇರ | ಚಾಸಾಃ 1 |
| ಪ್ರಾಯ | : | 35 ವರ್ಷ | **ದಿನಾಂಕಃ 25.06.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಮೀನುಗಾರಿಕೆ | |
| ವಾಸಸ್ಥಳ | : | ತಣ್ಣೀರುಬಾವಿ, ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಮೃತ ಸರಿತಾ ನನ್ನ ಅಕ್ಕ. ನಾವು ಒಟ್ಟು 4 ಜನ ಮಕ್ಕಳಿದ್ದು, ಅದರಲ್ಲಿ 3 ಹೆಣ್ಣು, ಒಂದು ಗಂಡು. ಈ ದಿನ ನ್ಯಾಯಾಲಯದ ಮುಂದೆ ವಿ.ಸಿ. ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ನೋಡಿ ಸಾಕ್ಷಿ, ಆತ ತನ್ನ ಅಕ್ಕನ ಗಂಡ ಎಂದು ನುಡಿಯುತ್ತಾರೆ.

2. ಆರೋಪಿ ಮತ್ತು ನನ್ನ ಅಕ್ಕನ ಮದುವೆ, ಆಕೆಯ ಮರಣದ 12 ವರ್ಷದ ಹಿಂದೆ ಆಗಿತ್ತು. ಅವರದ್ದು ಪ್ರೇಮ ವಿವಾಹ. ಮದುವೆಯ ಬಳಿಕ ಅವರು ತೆಂಕಎಕ್ಕಾರು ಗ್ರಾಮದ ದುರ್ಗಾನಗರದ ಪಲ್ಲದಕೋಡಿಯಲ್ಲಿ ವಾಸವಾಗಿದ್ದರು. ಅವರಿಗೆ ಒಬ್ಬ ಗಂಡು ಮಗ ಇರುತ್ತಾನೆ, ಆತನ ಹೆಸರು ರಾಹುಲ್, ಈಗ ಅವನಿಗೆ 12 ವರ್ಷ ವಯಸ್ಸು.

3. ಮದುವೆಯ ನಂತರ ಆರೋಪಿ ನನ್ನ ಅಕ್ಕನಿಗೆ ಕುಡಿದು ಬಂದು ಹೊಡೆಯುವುದು ಮಾಡುತ್ತಿದ್ದರು, ಆಗ ನಮ್ಮ ತಾಯಿ ಮತ್ತು ನಾನು ಮನೆಗೆ ಹೋಗಿ ಸಮಾಧಾನ ಮಾಡಿ ಬರುತ್ತಿದ್ದೆವು. ದಿನಾಂಕಃ 28.11.2022 ರಂದು ನಾನು ಕೆಲಸಕ್ಕೆ ಹೊರಟಿದ್ದಾಗ ಬೆಳಿಗ್ಗೆ ಸುಮಾರು 7.45 ಗಂಟೆಗೆ, ಚಾ.ಸಾ.3ರವರು ನನಗೆ ದೂರವಾಣಿ ಕರೆ ಮಾಡಿ, ಆರೋಪಿಯು ಹಲ್ಲೆ ಮಾಡಿದ್ದರಿಂದ ನನ್ನ ಅಕ್ಕ ಮೃತಪಟ್ಟಿದ್ದಾರೆ ಅಂತ ತಿಳಿಸಿದರು. ವಿಷಯ ತಿಳಿದು ನಾನು ಮತ್ತು ನನ್ನ ತಾಯಿ ಸ್ಥಳಕ್ಕೆ ಹೋದೆವು. ಅಲ್ಲಿ ಹೋಗಿ

ನೋಡಲಾಗಿ ನನ್ನ ಅಕ್ಕ ಶೆಡ್ಡಿನ ಒಳಗೆ ಮಲಗಿದ ಸ್ಥಿತಿಯಲ್ಲಿದ್ದರು, ಆಕೆಯ ಎಡಕಣ್ಣಿನ ಮೇಲೆ ಹರಿದ ಗಾಯವಾಗಿತ್ತು ಮತ್ತು ಕೈಕಾಲಿನ ಮೇಲೆ ಚಿಕ್ಕಚಿಕ್ಕ ಗಾಯಗಳಿದ್ದವು. ನನ್ನ ಅಕ್ಕ ಮೃತಪಟ್ಟಿದ್ದರು. ಸದರಿ ಸಾವು ಹೇಗಾಯಿತು ಎಂದು ಚಾ.ಸಾ.2 ಮತ್ತು ಚಾ.ಸಾ.3ರವರ ಬಳಿ ವಿಚಾರಿಸಲಾಗಿ, ಹಿಂದಿನ ದಿನ ರಾತ್ರಿ 8.00 ಗಂಟೆಗೆ ಆರೋಪಿ ಕುಡಿದು ಬಂದು ಮರದ ರೀಪರ್ ನಲ್ಲಿ ನನ್ನ ಅಕ್ಕನಿಗೆ ಹಲ್ಲೆ ನಡೆಸಿದ್ದಾರೆ ಅಂತ ತಿಳಿಯಿತು.

4. ನನ್ನ ಅಕ್ಕ ಮೃತಪಟ್ಟ ವಿಷಯವನ್ನು ಅಕ್ಕನ ಮಗ ಚಾ.ಸಾ.4/ರಾಹುಲ್ ಚಾ.ಸಾ.2ರವರಿಗೆ ಬೆಳಿಗ್ಗೆ 7.15 ಗಂಟೆಗೆ ತಿಳಿಸಿದರ ಮೇರೆಗೆ ನನಗೆ ಚಾ.ಸಾ.2ರವರು ಆ ರೀತಿ ಕರೆ ಮಾಡಿರುತ್ತಾರೆ. ಸ್ಥಳಕ್ಕೆ ಬಜ್ಪೆ ಪೊಲೀಸರು ಬಂದಾಗ ನಾನು ಹೇಳಿಕೆ ದೂರನ್ನು ನೀಡಿರುತ್ತೇನೆ. ಸದರಿ ಹೇಳಿಕೆ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿ.ಪಿ.1(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದ:-</u>

(ಆರೋಪಿ ಪರ ಶ್ರೀ ಜಿ.ವಿ.ಜಿ. ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

**ದಿನಾಂಕಃ 29.08.2024** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ-

5. ನಾನು ಘಟನೆ ದಿನ ಅಲ್ಲದೇ ಅದಕ್ಕಿಂತ ಎರಡು ತಿಂಗಳ ಹಿಂದೆ ಅಕ್ಕನ ಮನೆಗೆ ಹೋಗಿದ್ದೆ. ನನ್ನ ಅಕ್ಕನ ಮನೆಯ ಪಕ್ಕದಲ್ಲಿ ಚಾ.ಸಾ.2 ಮತ್ತು ಚಾ.ಸಾ.3ರವರ ಮನೆಗಳಿವೆ ನಂತರ ಉಳಿದ ಮನೆಗಳು ಸ್ವಲ್ಪ ದೂರದಲ್ಲಿವೆ. ನನ್ನ ಅಕ್ಕನ ಮನೆಗೆ ಹೋದಾಗ ನಾನು ಚಾ.ಸಾ.2 ಮತ್ತು ಚಾ.ಸಾ.3ರವರೊಡನೆ ಮಾತನಾಡಿ ಬರುತ್ತೇನೆ. ಸದರಿಯವರ ಫೋನ್ ನಂಬರ್ ಗೊತ್ತಿದೆ.

6. ನಾನು ಅಕ್ಕನ ಮನೆಗೆ ಹೋಗುವಾಗ 4 ಜನ ಪೊಲೀಸರು ಮತ್ತು ಊರಿನವರು ಇದ್ದರು. ಪೊಲೀಸರಿಗೆ ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಆಗ ಸ್ಥಳದಲ್ಲಿ ಆರೋಪಿ ಇರಲಿಲ್ಲ. ನನ್ನ ಅಕ್ಕ ವಾಸ ಮಾಡುತ್ತಿದ್ದ ಶೆಡ್, ಕಪ್ಪು ಕಲ್ಲಿನ ಕೋರೆಯ ಪಕ್ಕದಲ್ಲಿ ಇತ್ತು. ನಾನು ಅಕ್ಕನ ಮನೆಗೆ ಹೋದಾಗ ಚಾ.ಸಾ.4 ಮನೆಯಲ್ಲಿದ್ದ. ನಾನು ಪೊಲೀಸರಿಗೆ ದೂರು ನೀಡಿಲ್ಲ ಮತ್ತು ದೂರು ನೀಡಿದವರು ಯಾರು ಅಂತ ಗೊತ್ತಿಲ್ಲ. ಅಕ್ಕನ ಮನೆಯಿಂದ ನಾನು ಆಸ್ಪತ್ರೆಗೆ ಹೋಗಿ ನಂತರ ನಮ್ಮ ಮನೆಗೆ ಹಿಂತಿರುಗಿರುತ್ತೇನೆ.

7. ಆರೋಪಿ ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದರು. ನನ್ನ ಅಕ್ಕ ಮನೆಯಲ್ಲಿರುತ್ತಿದ್ದಳು. ನನ್ನ ಅಕ್ಕ ಕಲ್ಲಿನ ಕೋರೆಯಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಅಕ್ಕ ಕಲ್ಲಿನ ಕೋರೆಯಲ್ಲಿ ಕೆಲಸ ಮಾಡುವ ಕಾಲಕ್ಕೆ ಆಕೆ ಜಾರಿ ಬಿದ್ದು, ಮೈಕೈಗೆ ಗಾಯ ಆಗಿ ಆಕೆ ಮೃತಪಟ್ಟಿದ್ದಾಳೆ

ಎಂದರೆ ಸರಿಯಲ್ಲ. ನನ್ನ ಅಕ್ಕ ಕೆಲಸ ಮಾಡುವ ವೇಳೆ ಬಿದ್ದು ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿದ್ದು ಕೇಳಿದೆ, ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.